Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Ref: KLS /VDIT/ 106/2022-23 Date: 12-05-2022

**ಪತ್ರಿಕಾ ಪ್ರಕಟಣೆ:**

## ಕೆ.ಎಲ್.ಎಸ್ ವಿ.ಡಿ.ಐ.ಟಿ "ಸಂಸ್ಥಾಪನಾ ಸಮಾರಂಭ"

ಕೆ.ಎಲ್.ಎಸ್ ವಿ.ಡಿ.ಐ.ಟಿ ಹಳಿಯಾಳದಲ್ಲಿ ಮೇ 11 ರಂದು ಸಂಸ್ಥಾಪನಾ ಸಮಾರಂಭವನ್ನು ವಿದ್ಯುಕ್ತವಾಗಿ ಆಚರಿಸಲಾಯಿತು. ಗೌರವ ಅತಿಥಿಗಳಾಗಿ ಪಾಲ್ಗೊಂಡಿದ್ದ ಹಳಿಯಾಳದ ಮಾನ್ಯ ಶಾಸಕರು ಮತ್ತು ಸಂಸ್ಥೆಯ ಪೋಷಕರಾದ ಶ್ರೀಯುತ ಆರ್ ವಿ ದೇಶಪಾಂಡೆ ಅವರು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ನೀಡುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಮಹಾವಿದ್ಯಾಲಯವು ಯಶಸ್ವಿಯಾಗಿ 17 ವರ್ಷಗಳನ್ನು ಪೂರೈಸಿದ ಕುರಿತು ಶುಭ ಹಾರೈಸಿದರು ಮತ್ತು ವಿದ್ಯಾರ್ಥಿಗಳು ಉತ್ತಮ ಗುರಿಯೊಂದಿಗೆ ಕಠಿಣ ಪರಿಶ್ರಮದಿಂದ ಪ್ರಾಮಾಣಿಕವಾಗಿ ಕಲಿತು ಮಹಾವಿದ್ಯಾಲಯದ ರಾಯಭಾರಿಯಾಗಿ ಔದ್ಯೋಗಿಕ ಜಗತ್ತಿನಲ್ಲಿ ಗುಣಮಟ್ಟದಿಂದ ಕೆಲಸ ಮಾಡಿ ಯಶಸ್ಸು ಹೊಂದಬೇಕು ಎಂದು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಕರಿಸಿದ್ದಪ್ಪ ಅವರು ಮಾತನಾಡುತ್ತ ಮಹಾವಿದ್ಯಾಲಯವು ಉತ್ತಮ ದಿಶೆಯಲ್ಲಿ ಸಾಗುತ್ತಿದ್ದು ಬೋಧನೆ ಹಾಗೂ ಕಲಿಕೆಗೆ ಪೂರಕ ವಾತಾವರಣ ಹೊಂದಿದೆ ಮತ್ತು ಮಾದರಿ ಇಂಜನಿಯರಿಂಗ್ ಕಾಲೇಜಾಗಿ ರೂಪುಗೊಂಡಿದೆ. ಈ ದಿಶೆಯಲ್ಲಿ ಕರ್ನಾಟಕ ಲಾ ಸೊಸೈಟಿಯು ಪ್ರಯತ್ನ ಪ್ರಶಂಸನೀಯವಾಗಿದೆ ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆ.ಎಲ್.ಎಸ್ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ. ರಾಮ ಭಂಡಾರೆ ಅವರು ಮಾತನಾಡುತ್ತ ಮಹಾವಿದ್ಯಾಲಯ ಗುಣಮಟ್ಟದ ಶಿಕ್ಷಣ ನೀಡಲು ಬದ್ಧವಾಗಿದ್ದು ಈ ಕುರಿತಂತೆ ಅಗತ್ಯವಿರುವ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ನುಡಿದರು. ಕೆ.ಎಲ್. ಎಸ್ ಸಂಸ್ಥೆಯ ಮತ್ತೊಬ್ಬ ಉಪಾಧ್ಯಕ್ಷರಾದ ಶ್ರೀ. ಡಿ. ವಿ. ಕುಲಕರ್ಣಿ ಮತ್ತು ಕಾರ್ಯದರ್ಶಿಗಳಾದ ಶ್ರೀ. ಎಸ್. ವಿ. ಗಣಾಚಾರಿ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ವಿ.ತಾವಿ ಕುಲಸಚಿವರಾದ ಶ್ರೀ. ಎ. ಎಸ್ ದೇಶಪಾಂಡೆ ಅವರು ಮಾತನಾಡುತ್ತ ಮಹಾವಿದ್ಯಾಲಯ ಉತ್ತಮ ಸಾಧನೆ ತೋರುತ್ತಿದ್ದು ಎಲ್ಲ ಶೈಕ್ಷಣಿಕ ಮತ್ತು ಮೂಲಸೌಕರ್ಯದ ಮಾನದಂಡಗಳನ್ನು ಪಾಲಿಸುತ್ತಿದೆ ಎಂದು ನುಡಿದರು.

ಮಹಾವಿದ್ಯಾಲಯದ ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷರುಗಳಾದ ಶ್ರೀ.ಪಿ. ಜಿ. ಬಡಕುಂದ್ರಿ, ಶ್ರೀ. ಎಮ್. ಆರ್. ಕುಲಕರ್ಣಿ, ಶ್ರೀ. ಪಿ. ಎಸ್. ಸಾವಕಾರ್, ಶ್ರೀ. ರಾಜೇಂದ್ರ ಬೆಳಗಾಂವಕರ್ ಮತ್ತು ಆಕಾಶವಾಣಿ ಧಾರವಾಡ ಕೇಂದ್ರದ ಕಾರ್ಯಕ್ರಮ ನಿರ್ದೇಶಕರಾದ ಶ್ರೀ. ಬಸು ಬೇವಿನಗಿಡದ ಅವರನ್ನು ಸನ್ಮಾನಿಸಲಾಯಿತು. ಕೆ.ಎಲ್.ಎಸ್ ಆಡಳಿತ ಮಂಡಳಿ ಸದಸ್ಯರುಗಳಾದ ಶ್ರೀ.ಎಮ್. ಆರ್ ಕುಲಕರ್ಣಿ, ಶ್ರೀ. ಯು. ಎನ್. ಕಲಕುಂದ್ರಿಕರ್, ಶ್ರೀ. ಆರ್. ಎಸ್. ಮುತಾಲಿಕ್ ಮತ್ತು ಶ್ರೀ. ಪಿ. ಎನ್. ಕಠಾವಿ, ಶ್ರೀ. ಅತುಲ್ ಆಲೂರ್ ಉಪಸ್ಥಿತರಿದ್ದರು.

ಮಹಾವಿದ್ಯಾಲಯದ ಪ್ರವೇಶದ್ವಾರದಲ್ಲಿ ನಿರ್ಮಿಸಿದ ದಿ. ವಿಶ್ವನಾಥರಾವ್ ದೇಶಪಾಂಡೆ ಅವರ ಪುತ್ಥಳಿಯನ್ನು ಈ ಸಂದರ್ಭದಲ್ಲಿ ಅನಾವರಣಗೊಳಿಸಲಾಯಿತು. ನೂತನವಾಗಿ ನಿರ್ಮಿಸಿದ ಸಿವಿಲ್ ಇಂಜನಿಯರಿಂಗ್ ವಿಭಾಗದ ಕಟ್ಟಡ, ಬಾಸ್ಕೆಟ್ ಬಾಲ್ ಮೈದಾನ, ಸೆಮಿನಾರ್ ಹಾಲ್, ತಾಂತ್ರಿಕ ವಸ್ತು ಪ್ರದರ್ಶನ ಕೇಂದ್ರ, ಟಯೋಟಾ ಮಾದರಿ ಇಂಜಿನ್ ಪ್ರದರ್ಶನ ಮತ್ತು ಔಷಧೀಯ ಸಸ್ಯೋದ್ಯಾನಗಳನ್ನು ಉದ್ಘಾಟಿಸಲಾಯಿತು. ಆಕಾಶವಾಣಿ ಧಾರವಾಡದ ಮುಖಾಂತರ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳು 60 ಸಂಚಿಕೆಗಳಲ್ಲಿ ಪ್ರಸ್ತುತಪಡಿಸಿದ ಕಾರ್ಯಕ್ರಮದ ಆಧಾರಿತವಾದ "ಜನಸಾಮಾನ್ಯರಿಗಾಗಿ ತಂತ್ರಜ್ಞಾನ" ಎಂಬ ಕೃತಿಯನ್ನು ಲೋಕಾರ್ಪಣೆಗೊಳಿಸಲಾಯಿತು. ಈ ಬಾನುಲಿ ಕಾರ್ಯಕ್ರಮದ ಪ್ರಶ್ನೆಗಳಿಗೆ ಉತ್ತರಿಸಿ ಪ್ರಶಸ್ತಿ ಪಡೆದ ಶ್ರೋತೃಗಳಾದ ಭಾಗ್ಯಾ ಪಾಟೀಲ್, ಮಂಗಲಪ್ಪಾ ಎನ್ ಮತ್ತು ಶಿವಾನಂದ ಹಲಗಟ್ಟಿ ಅವರನ್ನು ಪುರಸ್ಕರಿಸಲಾಯಿತು.

ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕುರ್ ಸಭಿಕರನ್ನು ಸ್ವಾಗತಿಸಿದರು. ಪ್ರಾಂಶುಪಾಲರಾದ ಡಾ. ವಿ. ಎ. ಕುಲಕರ್ಣಿ ವಂದಿಸಿದರು. ಪ್ರೊ. ಲಕ್ಷ್ಮಿ ಹಟ್ಟಿಹೊಳಿ ಮತ್ತು ಪ್ರೊ. ರಶ್ಮಿ ಎಮ್ ನಿರೂಪಿಸಿದರು. ಕೆ.ಎಲ್.ಎಸ್ ಸಂಸ್ಥೆಯ ವಿವಿಧ ಮಹಾವಿದ್ಯಾಲಯಗಳ ಪ್ರಾಂಶುಪಾಲರು, ಮಹಾವಿದ್ಯಾಲಯದ ಮಾಜಿ ವಿದ್ಯಾರ್ಥಿಗಳು, ಬೋಧಕ ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


KLS VDIT


LAW SOCIETY'S
DESHPANDE
OF TECHNOLOGY
HALIYAL
ಹಳಿಯಾಳ


अमृतं तु विद्या